# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:DDP:ಆಂಮ:2007-08 ದಿನಾಂಕ: 20-01-2008

## ಆದೇಶ.

**ವಿಷಯ** :2006-07 ನೇ ಸಾಲಿನ DDP ಯೋಜನೆಯಡಿ ಜಾಲಿಬೆಂಚಿ ಗ್ರಾಮದ ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿ ಅಂದಾಜು ಪತ್ರಿಕೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ**: ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08/ ದಿನಾಂಕ: 24-12-2007.

ಉಲ್ಲೇಖಿತ ಪತ್ರದ ಮೂಲಕ ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು 2006-07 ನೇ ಸಾಲಿನ DDP ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಜಾಲಿಬೆಂಚಿ ಗ್ರಾಮದ ಕೊಳವೆ ನೀರು ಸರಬರಾಜು ಕಾಮಗಾರಿಯನ್ನು ಇದುವರೆಗೆ ಪ್ರಾರಂಭಿಸಿಲ್ಲ ಎಂದು ದೃಢೀಕರಿಸಿರುತ್ತಾ ಅಂದಾಜು ಪತ್ರಿಕೆಯನ್ನು ಆಡಳಿತಾತ್ಮಕ ಮಂಜೂರಾತಿ ಕೋರಿ ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸಲ್ಲಿಸಿದ ಅಂದಾಜು ಪತ್ರಕೆಯನ್ನು ಪರಿಶೀಲಿಸಲಾಗಿಈ ಕಾಮಗಾರಿಗಾಗಿ 2006-07 ನೇ ಸಾಲಿನಲ್ಲಿ ರೂ. 10.00 ಲಕ್ಷಗಳನ್ನು ಒದಗಿ ಸಲಾಗಿದೆ. ಪ್ರಸ್ತುತ ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ರೂ. 11.85 ಲಕ್ಷಗಳಿಗೆ ಅಂದಾಜು ಪತ್ರಕೆಯನ್ನು ಸಲ್ಲಿಸಿರುತ್ತಾರೆ. ನಿಗದಿಪಡಿಸಿದ ಅನುದಾನಕ್ಕಿಂತ ಅಂದಾಜಿನ ಮೊತ್ತ ಹೆಚ್ಚಾಗಿ ರುವುದರಿಂದ ಯೋಜನೆಯಡಿ ವಿತರಣೆ ಪೈಪಲೈನ ಹಾಗು ಸ್ಟ್ಯಾಂಡ ಪೋಸ್ಟ ಅಳವಡಿಕೆಯಲ್ಲಿ ಅನುದಾನ ಮಿತಿಗೊಳಿಸಿ ಒಟ್ಟು ಯೋಜನೆಯಡಿ ಒದಗಿಸಿದ ಅನುದಾನ ರೂ.10.00 ಲಕ್ಷಗಳಿಗೆ ಮಿತಿಗೊಳಿಸಿ, ಕೆಳಕಾಣಿಸಿದ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಕಾಮಗಾರಿ ವಿವಿರ | ಮಿತಿಗೊಲಿಸಿದ ಅಂದಾಜು ಮೊತ್ತ ರೂ------ |
|---|---|---|
| 1 | ಜಾಲಿಬೆಂಚಿ ಗ್ರಾಮದ ಕೊಳವೆ ನೀರು ಸರಬರಾಜು ಯೋಜನೆ.<br>(50000 ಲೀ OHT, ಪೈ.ಲೈನ, ಪಂ.ಹೌಸ, ಪಂ. ಮಷಿನರಿ, KEB ಠೇವಣಿ ಹಾಗೂ 8-ಸ್ಟ್ಯಾಂಡ ಪೋಸ್ಟ ಒದಗಿಸುವುದು) | 10.00 ಲಕ್ಷ |
| | **ಒಟ್ಟು** | 10.00 ಲಕ್ಷ |

**ಷರತ್ತುಗಳು:**

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಎಲ್ಲಾ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.

4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ಕಾಮಗಾರಿಯನ್ನು ಲಬ್ಯ ಅನುದಾನ ಪರಿಗಣಿಸಿ ಅನುಷ್ಠಾನಗೊಳಿಸುವುದು ಹಾಗೂ ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.

(ಮು.ಕಾ.ಅಧಿಕಾರಿಗಳ
ಕ.ಟಿ.ಆದೇಶದ ಮೇರೆಗೆ)

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಪರವಾಗಿ
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅದ್ಯಕ್ಷರು/ಉಪಾದ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಪಂಚಾಯತ ರಾಜ್ ಇಂಜಿನೀಯರಿಂಗ ಉಪವಿಭಾಗ ರಾಯಚೂರು.
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ರಾಯಚೂರು.
6. ಅದ್ಯಕ್ಷರು / ಕಾರ್ಯದರ್ಶಿಗಳು ಕಮಲಾಪುರ ಗ್ರಾಮ ಪಂಚಾಯತ, ರಾಯಚೂರು ತಾಲ್ಲೂಕು ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಡೀಕರಿಸಲು ಸೂಚಿಸಿದೆ.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.